ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಹುಣಸೂರು

**ಸಿ.ಸಿ. 19/2018**

**ಸಿ.ಡಬ್ಲೂ-6 ಪಿ.ಡಬ್ಲೂ -5**

ದಿಃ **02.02.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಪುಟ್ಟಸ್ವಾಮಿಗೌಡ |
| ಗಂಡ/ತಂದೆಯ ಹೆಸರು | ಮಲ್ಲೇಗೌಡ |
| ವಯಸ್ಸು | ಸುಮಾರು 57 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಮೈಲಾಂಬೂರು ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ರಿಂದ 5 ಮತ್ತು 7 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಚಾಸಾ-2 ರವರ ಮನೆ ಮುಂದೆ ಮೈಲಾಂಬೂರಲ್ಲಿ 6-7 ವರ್ಷಗಳ ಹಿಂದೆ ಸಂಜೆ 7.30-8.00 ಗಂಟೆ ಸಮಯದಲ್ಲಿ ಆರೋಪಿತರಿಗೂ ಹಾಗೂ ಚಾಸಾ-2 ರವರಿಗೂ ಗಲಾಟೆಯಾಗುತ್ತಿದ್ದು, ಆಗ ನಾನು ನಮ್ಮ ಮನೆಯ ಕಡೆಯಿಂದ ಊರಿನೊಳಗೆ ಆರೋಪಿತರ ಮನೆಯ ಮುಂದೆ ಬರುತ್ತಿದ್ದಾಗ, ಚಾಸಾ-2 ಮತ್ತು ಆರೋಪಿತರು ಕೂಗಾಡುತ್ತಿದ್ದರು. ಆಗ ಯಾಕೆ ಕೂಗಾಡುತ್ತಿದ್ದೀರಾ ಎಂದು ಕೇಳಿದೆ. ಆರೋಪಿತರು ನಮ್ಮ ಜಾಗಕ್ಕೆ ಯಾಕೆ ಮನೆ ಕಟ್ಟಿದ್ದೀರಾ ಎಂದು ಗಲಾಟೆ ಮಾಡುತ್ತಿದ್ದರು. ಚಾಸಾ-2 ರವರು ನಮ್ಮ ಜಾಗದಲ್ಲಿ ಮನೆ ಕಟ್ಟಿದ್ದೇವೆ, ನಿಮ್ಮ ಜಾಗಕ್ಕೆ ಬಂದಿಲ್ಲ ಎಂದು ಹೇಳುತ್ತಿದ್ದರು. ಆರೋಪಿತರ ಮನೆಯವರು ಚಾಸಾ-2 ರವರಿಗೆ ತುಟಿಯಲ್ಲಿ ರಕ್ತ ಬರುವ ಹಾಗೆ ಹೊಡೆದಿದ್ದರು. ಯಾರು ಹೊಡೆದರು ಎಂದು ನೋಡಿಲ್ಲ. ನಾನು ಚಾಸಾ-2 ರವರಿಗೆ ಆಸ್ಪತ್ರೆಗೆ ಹೋಗುವಂತೆ ಹೇಳಿ ನಾನು ಊರಿನೊಳಗೆ

ಹೋಗಿರುತ್ತೇನೆ. ಪೊಲೀಸರು ಗಲಾಟೆಯ ವಿಚಾರ ಕೇಳಿಲ್ಲ. ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿಯಾಗಿರುವುದರಿಂದ ಸ. ಸ. ಅ ರವರ ಪಾಟೀಸವಾಲಿಗಾಗಿ ಅನುಮತಿಯನ್ನು ಕೋರಿದ್ದು, ಆಲಿಸಿ ಅನುಮತಿಸಲಾಯಿತು.)

ಪಾಟೀಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 08.11.2017 ರಂದು ಬೆಳಿಗ್ಗೆ 8.00 ಗಂಟೆಗೆ ಗಲಾಟೆಯಾಗಿರುತ್ತದೆಂದರೆ ಸಾಕ್ಷಿ ದಿನಾಂಕ ಗೊತ್ತಿಲ್ಲ, ಆದರೆ ಸಮಯ ಬೆಳಿಗ್ಗೆ 8.00 ಗಂಟೆ ಎಂದು ಹೇಳುತ್ತಾರೆ. ನೀವು ಹಾಗೂ ಚಾಸಾ-1 ರಿಂದ 5 ಮತ್ತು 7 ರವರು ಚಾಸಾ-2 ರವರ ಮನೆಯ ಮುಂದೆ ನಿಂತು ಮಾತನಾಡುತ್ತಿದ್ದಾಗ, ಆಗ ಆರೋಪಿತರು ಗುಂಪು ಕಟ್ಟಿಕೊಂಡು ಬಂದು, ಚಾಸಾ-2 ರವರಿಗೆ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ, ಮನೆ ಬಿಟ್ಟುಕೊಡಿ ಎಂದು ಬೈಯುತ್ತಿದ್ದರು ಎಂದರೆ ಸರಿ. ಆಗ ಚಾಸಾ-2 ರವರು ಕೇಳಲು ಹೋದಾಗ 1ನೇ ಆರೋಪಿ ಚಾಸಾ-2 ರವರನ್ನು ತಬ್ಬಿ ಹಿಡಿದಿದ್ದು, 2 ರಿಂದ 4ನೇ ಆರೋಪಿತರು ಚಾಸಾ-2 ರವರನ್ನು ಕೆಳಗೆ ಬಿಳಿಸಿ, 2ನೇ ಆರೋಪಿ ಚಾಸಾ-2 ರವರಿಗೆ ಕಾಲಿನಿಂದ ಮೇಲ್ಭಾಗದ ತುಟಿ ಬಳಿ ತುಳಿದಿರುತ್ತಾರೆ ಎಂದರೆ ಸರಿ. 3 ಮತ್ತು 4ನೇ ಆರೋಪಿತರು ಸಹ ಚಾಸಾ-2 ರವರನ್ನು ಕಾಲಿನಿಂದ ತುಳಿದು ಪೆಟ್ಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-3 ರವರು ಬಿಡಿಸಲು ಹೋಗಿದ್ದು, 1ನೇ ಆರೋಪಿ ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದ ಚಾಸಾ-3 ರವರಿಗೆ ಬಲಭಾಗದ ಬುಜದ ಹಿಂಭಾಗದ ಮೇಲ್ಭಾಗದಲ್ಲಿ, ಬಲ ಸೊಂಟದ ಮೇಲ್ಭಾಗದಲ್ಲಿ ಹೊಡೆದು ತೀವ್ರ ಸ್ವರೂಪದ ಗಾಯಪಡಿಸಿರುತ್ತಾರೆಂದರೆ ಸರಿ. ಚಾಸಾ-4 ರವರು ಬಿಡಿಸಲು ಮುಂದಾದಾಗ 1ನೇ ಆರೋಪಿ ದೊಣ್ಣೆಯಿಂದ ಎಡತೊಡೆ, ಎಡಹೆಬ್ಬೆರಳು ಹಾಗೂ ಎದೆಯ ಭಾಗಕ್ಕೆ ಹೊಡೆದು

ಗಾಯಪಡಿಸಿರುತ್ತಾರೆಂದರೆ ಸರಿ. ಚಾಸಾ-1 ರವರು ಬಿಡಿಸಲು ಮುಂದಾದಾಗ 5ನೇ ಆರೋಪಿ ಜುಟ್ಟು ಹಿಡಿದು ಎಳೆದಾಡಿ, ನೂಕಿರುತ್ತಾರೆ ಎಂದರೆ ಸರಿ. 2ನೇ ಆರೋಪಿ ಚಾಸಾ-5 ರವರಿಗೆ ಇನ್ನೊಂದು ದೊಣ್ಣೆಯಿಂದ ಬಲಗೈನ ಹೆಬ್ಬರಳಿಗೆ ಹೊಡೆದಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿತರು ಹೋಗುವಾಗ ಚಾಸಾ-2 ರವರ ಕುಟುಂಬಕ್ಕೆ ಇವತ್ತಲ್ಲಾ ನಾಳೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ಆಗ ನೀವು ಹಾಗೂ ಚಾಸಾ-7 ರವರು ಗಲಾಟೆ ಬಿಡಿಸಿದ್ದು, ಚಾಸಾ-1 ರಿಂದ 5 ರವರು ಯಾವುದೋ ವಾಹನದಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಬಂದು ದಾಖಲಾಗಿರುತ್ತಾರೆಂದರೆ ಸರಿ. ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2ರಿಂದಲೇ ಆರೋಪಿತರು ಚಾಸಾ-2 ಮತ್ತು ಅವರ ಕುಟುಂಬದವರ ಮೇಲೆ ಹಲ್ಲೆ ಮಾಡಿರುತ್ತಾರೆಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಸದರಿ ವಿಚಾರವಾಗಿ ಪೊಲೀಸರು ವಿಚಾರ ಮಾಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಊರಿಗೆ ಬಂದಾಗ ಹೇಳಿರುತ್ತೇನೆ ಎಂದು ಹೇಳುತ್ತಾರೆ.

## ಪಾಟೀ ಸವಾಲು ಆರೋಪಿ ಪರ ವಕೀಲರು ಶ್ರೀ ಎಸ್.ಪಿ. ವಕೀಲರಿಂದಃ

ಚಾಸಾ-2, ನೀವು ಹಾಗೂ ಚಾಸಾ-8 ಒಟ್ಟಿಗೆ ನ್ಯಾಯಾಲಯಕ್ಕೆ ಬಂದು ಬಂದಿರುತ್ತೀರಿ ಎಂದರೆ ಸರಿ. ಚಾಸಾ-2, ನೀವು ಹಾಗೂ ಚಾಸಾ-8 ರವರು ಪ್ರಕರಣದಲ್ಲಿ ಏನೆನೂ ಸಾಕ್ಷ್ಯ ನುಡಿಯಬೇಕೆಂಬ ವಿಚಾರವನ್ನು ನೀವುಗಳು ಮಾತನಾಡಿಕೊಂಡು ಬಂದಿರುತ್ತೀರಾ ಎಂದರೆ ಸಾಕ್ಷಿ ಪೊಲೀಸರು ಕರೆಸಿಕೊಂಡರು ಎಂದು ಹೇಳುತ್ತಾರೆ. ಸಾಕ್ಷಿ ವಿಚಾರಣೆ ಬಗ್ಗೆ ಪೊಲೀಸರು ನಿಮಗೆ ಈ ದಿನ ಹೇಳಿಕೊಟ್ಟಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ಇದೇ ನ್ಯಾಯಾಲಯದಲ್ಲಿ ಸುಮಾರು ಪ್ರಕರಣಗಳು ಹಾಗೂ ದಾವೆಗಳಲ್ಲಿ ಸಾಕ್ಷ್ಯ ನುಡಿದಿರುತ್ತೀರಾ ಎಂದರೆ ಸಾಕ್ಷಿ ಸಾಕ್ಷಿನೇ ಹೇಳಿಲ್ಲ ಎಂದು

ಹೇಳುತ್ತಾರೆ. ನಿಮ್ಮ ಮೇಲೆ ಬೇರೆದವರು ಇದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಚಾಸಾ-2 ನಿಮಗೆ ದಾಯಾದಿಗಳು ಎಂದರೆ ಸಾಕ್ಷಿ ಆರೋಪಿತರು ಹಾಗೂ ಚಾಸಾ-2 ಇಬ್ಬರು ದಾಯಾದಿಗಳು ಎಂದು ಹೇಳುತ್ತಾರೆ.

ನಿಮ್ಮ ಮನೆ ಹಾಗೂ ಆರೋಪಿತರು ಹಾಗೂ ಚಾಸಾ-2 ರವರ ಮನೆ ಅಕ್ಕಪಕ್ಕದಲ್ಲಿ ಇಲ್ಲ ಎಂದರೆ ಸರಿ. ನಿಮ್ಮ ಮನೆಗೂ ಹಾಗೂ ಆರೋಪಿತರ ಮನೆಗೂ ಎಷ್ಟು ದೂರ ಇದೆ ಎಂದರೆ ಸಾಕ್ಷಿ 100 ಅಡಿ ಎಂದು ಹೇಳುತ್ತಾರೆ. ನಿಮ್ಮ ಮನೆಗೂ ಹಾಗೂ ಆರೋಪಿತರ ಮನೆಗೂ ಸುಮಾರು 1 ಪರ್ಲಾಂಗ್ ದೂರ ಇದೆ ಎಂದರೆ ಸರಿಯಲ್ಲ. ನೀವು ರಸ್ತೆಯಲ್ಲಿ ಬರಬೇಕಾದರೆ, ನೀವಲ್ಲದೇ ಬೇರೆ ಯಾರಾದರೂ ಗ್ರಾಮಸ್ತರು ಕೃತ್ಯ ನಡೆಯಿತು ಎಂದು ಹೇಳುವ ಜಾಗದಲ್ಲಿ ಇದ್ದರಾ ಎಂದರೆ ಸಾಕ್ಷಿ ಯಾರು ಇರಲಿಲ್ಲ ಎಂದು ಹೇಳುತ್ತಾರೆ. ಆರೋಪಿತರ ಮನೆಯಿಂದ 50 ಅಡಿ ದೂರದಲ್ಲಿ ಒಂದು ವೃತ್ತ, ಹೊಟೇಲ್ ಹಾಗೂ ದೇವಸ್ಥಾನ ಇದೆ ಎಂದರೆ ಸರಿ. ಬೆಳಗ್ಗಿನ ಜಾವದಲ್ಲಿ ಸದರಿ ಹೋಟೇಲ್ ಬಳಿ ನಿಮ್ಮ ಗ್ರಾಮಸ್ತರು ತುಂಬಾ ಜನ ಕುಳಿತಿರುತ್ತೀರಿ ಎಂದರೆ ಸರಿ. ಆರೋಪಿ ಹಾಗೂ ಚಾಸಾ-2 ರವರ ಮನೆಯ ಬಳಿ ಗಲಾಟೆಯಾದರೆ, ಹೋಟೇಲ್ ಬಳಿ ಕಾಣಿಸುತ್ತದೆಂದರೆ ಸರಿ. ನೀವು ಘಟನೆ ನಡೆಯಿತು ಎಂದು ಹೇಳುವ ಸ್ಥಳಕ್ಕೆ ಹೋದ ಸಮಯದಲ್ಲಿ ಹೋಟೇಲ್ ನಲ್ಲಿದ್ದ ಗ್ರಾಹಕರು ಯಾರು ಅಲ್ಲಿಗೆ ಬಂದಿರಲಿಲ್ಲ ಎಂದರೆ ಸರಿ. ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲಿ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿ ಆರೋಪಿತರು ಹಾಗೂ ಚಾಸಾ-2 ರವರ ಮನೆ ಕಡೆ 4-5 ಜನ ಇದ್ದರು ಎಂದು ಹೇಳುತ್ತಾರೆ. ಚಾಸಾ-2 ರವರಿಗೆ ತುಟಿಯ ಬಳಿ ಯಾವ ರೀತಿ ರಕ್ತಗಾಯವಾಯಿತೆಂದು ನೀವು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಯಾವ ವ್ಯಕ್ತಿಯ ಬಳಿ ಯಾವ ಆಯುಧಗಳು ಇದ್ದವು ಎಂದು ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸಾಕ್ಷಿ ದೊಣ್ಣೆಗಳು ಇದ್ದವು ಎಂದು ಹೇಳಿದ್ದರು, ಖುದ್ದಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಾಸಾ-2 ಹಾಗೂ ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರು ನಿಮ್ಮ ದಾಯಾದಿಯಾದ್ದರಿಂದ, ಚಾಸಾ-2 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಇಬ್ಬರು ದಾಯಾದಿಗಳು ಎಂದು ಹೇಳುತ್ತಾರೆ. ಮು.ಮಾ-1 ಮತ್ತು 2 ನ್ನು ಇಂದೇ ಮೊದಲ ಬಾರಿಗೆ ನೋಡುತ್ತಿದ್ದೀರಿ ಎಂದರೆ ಸರಿ. ಚಾಸಾ-2 ರವರಿಗೆ ಸಹಾಯ ಮಾಡಲು, ಅವರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸರಿ ಇದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ಹುಣಸೂರು.**